ತಾಲ್ಲೂಕಿನಲ್ಲಿರುವ ಒಟ್ಟು ಎಸ್.ಎಸ್.ಐ.ಗಳೆಷ್ಟು; ಅದರಲ್ಲಿ ಕಾರ್ಯನಿರತರ-ವಾಗಿರುವುದೆಷ್ಟು; ಮತ್ತು ರೋಗಗ್ರಸ್ಥವಾಗಿರುವವು ಎಷ್ಟು; ಮತ್ತು ಮುಚ್ಚಿರುವುವೆಷ್ಟು;

ಆ) ಈ ಸಣ್ಣ ಕೈಗಾರಿಕಾ ಘಟಕಗಳಿಗೆ ಇಲಾಖಾ ವತಿಯಿಂದ ನೀಡಿರುವ ಶೆಡ್ಡುಗಳೆಷ್ಟು; ಅವುಗಳಿಗೆ ಎಷ್ಟು ಶೆಡ್ ಬೇಕಾಗುತ್ತದೆ; ಈ ಎಸ್.ಎಸ್.ಐ.ಗಳಲ್ಲಿ ಎಷ್ಟು ಜನಕ್ಕೆ ತರಬೇತಿ ನೀಡಲಾಗುತ್ತದೆ;

ಇ) ಕಳೆದ ಒಂದು ವರ್ಷ ಅವಧಿಯಲ್ಲಿ ಎಷ್ಟು ಸಣ್ಣ ಕೈಗಾರಿಕೆಗಳು ಮಧ್ಯಮ ಅಥವಾ ಬೃಹತ್ ಕೈಗಾರಿಕೆಗಳಾಗಿ ಪರಿವರ್ತನೆಗೊಂಡಿದೆ;

ಈ) ಈ ರೀತಿ ಪರಿವರ್ತನೆಗೊಂಡ ಘಟಕಗಳಿಗೆ ಏನು ಸೌಲಭ್ಯ ಒದಗಿಸಲಾಗಿದೆ; ಹಾಗೂ ಅವರು ಹೂಡಿರುವ ಬಂಡವಾಳವೆಷ್ಟು?

ಎಸ್.ಆರ್.ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು):

ಅ) ಕಳೆದ ಒಂದು ವರ್ಷ ಮೈಸೂರು ಜಿಲ್ಲೆಯಲ್ಲಿ 1052, ಮೈಸೂರು ತಾಲ್ಲೂಕಿನಲ್ಲಿ-434, ಮೈಸೂರು ತಾಲ್ಲೂಕಿನಲ್ಲಿರುವ ಒಟ್ಟು ಎಸ್.ಎಸ್.ಐ.ಗಳು 8223, ಕಾರ್ಯನಿರತವಾಗಿರುವ ಘಟಕಗಳು 5881, ರೋಗಗ್ರಸ್ತವಾಗಿರುವುದು-96, ಮುಚ್ಚಿರುವ ಎಸ್ಎಸ್ಐ ಘಟಕಗಳ ನಿಖರವಾದ ವಿವರ 2001ರ ಆಗಸ್ಟ್ 1 ರಿಂದ ಪ್ರಾರಂಭವಾಗುವ ಸರ್ವೆ ಮುಗಿದ ನಂತರ ಮಾಹಿತಿ ಲಭ್ಯವಾಗುತ್ತದೆ.

ಆ) 1) ಇಲಾಖಾ ವತಿಯಿಂದ ಕೆ.ಎಸ್.ಎಸ್.ಐ.ಡಿ.ಸಿ. ಮೂಲಕ 508 ಶೆಡ್‌ಗಳನ್ನು ಹಂಚಿಕೆ ಮಾಡಲಾಗಿದೆ.

2) ಈ ಕೈಗಾರಿಕೆಗಳಲ್ಲಿ ತರಬೇತಿ ನೀಡುವ ಬಗ್ಗೆ ಇಲಾಖೆಯಲ್ಲಿ ಯಾವುದೇ ಯೋಜನೆ ಇರುವುದಿಲ್ಲ.

ಇ) ಇಲ್ಲ, ಯಾವುದೇ ಸಣ್ಣ ಕೈಗಾರಿಕೆಗಳು ಮಧ್ಯಮ ವರ್ಗದ ಕೈಗಾರಿಕೆಗಳಾಗಿ ಪರಿವರ್ತನೆಗೊಂಡಿರುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಸಣ್ಣ ಕೈಗಾರಿಕೆಗಳನ್ನು ಪುನ ಶ್ಚೇತನಗೊಳಿಸುವುದು.

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಭವಿಷ್ಯ ಅವನತಿಯತ್ತ ಸಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಇದಕ್ಕೆ ಕಾರಣಗಳಾವುವು; (ವಿವರ ನೀಡುವುದು)

ಆ) ಕೆ.ಎಸ್.ಎಸ್.ಐ.ಡಿ.ಸಿ.ಯವರು ಕಡಿಮೆ ಬೆಲೆಗೆ ರೈತರಿಂದ ಜಮೀನು ಖರೀದಿ ಮಾಡಿ ಸದರೀ ಜಮೀನುಗಳಲ್ಲಿ ಕೈಗಾರಿಕಾ ಶೆಡ್‌ಗಳನ್ನು ನಿರ್ಮಿಸಿ ಈ ಆವರಣಗಳಲ್ಲಿ ಯಾವುದೇ ಮೂಲಭೂತ ಸೌಕರ್ಯಗಳನ್ನು ಕಲ್ಪಿಸದೇ ಅತೀ ಹೆಚ್ಚಿನ ಬೆಲೆಗೆ ಸಣ್ಣ ಕೈಗಾರಿಕೋದ್ಯಮಿಗಳಿಗೆ ಮಾರಾಟ ಮಾಡುತ್ತಿದೆ ಉದಾ: ಹೊಸಕೋಟೆ ಕೈಗಾರಿಕಾ ಶೆಡ್‌ಗಳು, ಇದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಪುನಶ್ಚೇತನಕ್ಕೆ ಸರ್ಕಾರ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ; (ವಿವರ ನೀಡುವುದು)

ಈ) ಈ ಕಾರ್ಯಕ್ರಮಗಳಲ್ಲಿ ಈವರೆಗೆ ಎಷ್ಟು ಹಣವನ್ನು ಸರ್ಕಾರ ಬಿಡುಗಡೆ ಮಾಡಲಾಗಿದೆ. ಹಾಗೂ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಎಸ್.ಆರ್.ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು):

ಅ) ಬಂದಿದೆ, ಕೈಗಾರಿಕಾ ಉದಾರೀಕರಣ, ಜಾಗತಿಕರಣ ಮತ್ತು ಕೈಗಾರಿಕಾ ಹಿಂಜರಿತನ ಇತ್ಯಾದಿಗಳಿಂದ ಸಣ್ಣ ಕೈಗಾರಿಕೆಗಳಿಗೆ ತೊಂದರೆ ಉಂಟಾಗಲು ಮುಖ್ಯ ಕಾರಣಗಳಾಗಿರುತ್ತವೆ.

ಆ) ಕರ್ನಾಟಕ ರಾಜ್ಯ ಸರ್ಕಾರ ಕೈಗಾರಿಕಾ ಅಭಿವೃದ್ಧಿ ನಿಗಮ ಇವರು ರೈತರಿಂದ ನೇರವಾಗಿ ಭೂಮಿಯನ್ನು ಖರೀದಿ ಮಾಡಿರುವುದಿಲ್ಲ. ಆಯಾ ಸ್ಥಳೀಯ ಬೇಡಿಕೆಗ ಅನುಗುಣವಾಗಿ ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯಿಂದ ಭೂಮಿಯನ್ನು ಪಡೆದುಕೊಳ್ಳಲಾಗುತ್ತದೆ. ಕೈಗಾರಿಕಾ ಅಭಿವೃದ್ಧಿ ಮಂಡಳಿಯಿಂದ 8.84 ಹೆಕ್ಟೇರ್ ಜಮೀನನ್ನು ಪಡೆದು ಹೊಸಕೋಟೆ ಕೈಗಾರಿಕಾ ವಸಾಹತು ನಿರ್ಮಿಸಲಾಗಿದೆ. ಇದರಲ್ಲಿ 69 ಕೈಗಾರಿಕಾ ಮಳಿಗೆಗಳನ್ನು ಮತ್ತು 18 ನಿವೇಶನಗಳನ್ನು ಪಂಗಡಿಸಲಾಗಿದೆ. ಸಣ್ಣ ಕೈಗಾರಿಕಾ ಉದ್ಯಮಿಗಳಿಗೆ ಇವುಗಳನ್ನು ವಿತರಿಸುವಾಗ ಮಂಡಳಿಯು ನಿರ್ಧರಿಸಿದ ಬೆಲೆಯ ನಿರ್ಧಾರಣಾ ಸೂತ್ರದಂತೆ ಬೆಲೆ ನಿರ್ಧಾರಮಾಡಲಾಗುತ್ತದೆ. (ಬೋರ್ಡ್ ಫಾರ್ ಇಂಡಸ್ಟ್ರಿಯಲ್ ಅಂಡ್ ಫೈನಾನ್ಸಿಯಲ್ ರಿಕನ್‌ಸ್ಟ್ರಕ್ಷನ್)

ಇ) ರಾಜ್ಯದಲ್ಲಿ ಬಿ.ಐ.ಎಫ್.ಆರ್. ಘಟಕಗಳನ್ನು ಹೊರತುಪಡಿಸಿ ಸಣ್ಣ ಕೈಗಾರಿಕೆಗಳ ಪುನಃಶ್ಚೇತನಕ್ಕೆ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ:

1) ಬಡ್ಡಿರಹಿತ ಬೀಜಧನ ಸಾಲ - ರೂ 2.50 ಲಕ್ಷ ಯೋಜನಾ ವೆಚ್ಚದ ಶೇ.25ರಷ್ಟು.

2) ಕೆ.ಪಿ.ಟಿ.ಸಿ.ಎಲ್.ನಿಂದ ಘಟಕವು ಮುಚ್ಚಿದ ಅವಧಿಯಲ್ಲಿ ಯಾವುದೇ ನಿಗದಿತ ಹಾಗೂ ಬೇಡಿಕೆ ದರ ಪಾವತಿಯಿಂದ ವಿನಾಯಿತಿ ನೀಡಲಾಗಿದೆ.

3) ವಿದ್ಯುತ್ ಬಿಲ್ಲಿನ ಬಾಕಿ ಪಾವತಿಯನ್ನು ಶೇ.ಅರ್ಧದಷ್ಟು ಬಡ್ಡಿಯೊಡನೆ 6 ಅರ್ಧವಾರ್ಷಿಕ ಕಂತುಗಳಲ್ಲಿ ಪಾವತಿಸಲು ಅವಕಾಶ.

4) ಮಾರಾಟ ತೆರಿಗೆಯ ಬಾಕಿ ಪಾವತಿಸುವಲ್ಲಿ ಶೇ.ಅರ್ಧದಷ್ಟು ಬಡ್ಡಿಯೊಡನೆ 6 ಅರ್ಧವಾರ್ಷಿಕ ಕಂತುಗಳಲ್ಲಿ ಪಾವತಿಸಲು ಅವಕಾಶ.

5) ಕೆ.ಪಿ.ಟಿ.ಸಿ.ಎಲ್. ಮತ್ತು ವಾಣಿಜ್ಯ ತೆರಿಗೆ ಇಲಾಖೆಗಳು ಘಟಕಗಳು ಮುಚ್ಚಿದ ಅವಧಿಗೆ ಬಡ್ಡಿ ಲೆಕ್ಕ ಹಾಕುವಂತಿಲ್ಲ.

6) ಮುಂದಿನ ಅವಧಿಗೆ ಪಾವತಿ ಮಾಡಬೇಕಾದ ತೆರಿಗೆಗಳು ಬಡ್ಡಿ ಇಲ್ಲದೇ ಪಾವತಿಸಲು ಮೂರು ವರ್ಷಗಳವರೆಗೆ ಅವಕಾಶ.

ಈ) ರೋಗಗ್ರಸ್ಥ ಸಣ್ಣ ಕೈಗಾರಿಕೆಗಳಿಗೆ ಸರ್ಕಾರದಿಂದ ಬಡ್ಡಿ ರಹಿತ ಬೀಜಧನ ಸಾಲವನ್ನು ನೀಡಲಾಗುತ್ತಿದೆ. ಇದುವರೆವಿಗೆ 98 ಘಟಕಗಳಿಗೆ ರೂ.8.105 ಲಕ್ಷ ಬೀಜಧನ ಸಾಲ ಬಿಡುಗಡೆ ಮಾಡಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು ಲಗತ್ತಿಸಲಾಗಿದೆ.

ರಾಜ್ಯದಲ್ಲಿ ಭಿಕ್ಷುಕರ ಪುನರ್ವಸತಿ.

1942(2486)

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ಭಿಕ್ಷುಕರ ಜನಗಣತಿಯನ್ನೇನಾದರೂ ಮಾಡಲಾಗಿದೆಯೇ? (ವಿವರ ನೀಡುವುದು):